30,000. The Kadoli Village is about 15 Kms. away from Belgaum City. The Zilla Parishad has passed a resolution for starting of Primary Health Centre at Kadoli long back. The proposals were submitting to the government. Therefore, kindly accord sanction for the same and make budgetory supervision in this financial year.

ಶ್ರೀ ಹಾರನಹಳ್ಳಿ ರಾಮಸ್ವಾಮಿ : (ಕಾನೂನು ಸಚಿವರು) : (ಮುಖ್ಯ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ,ಬೆಳಗಾವಿ ಜಿಲ್ಲೆಗೆ 1992-93ನೇ ಸಾಲಿನಲ್ಲಿ ಕನಿಷ್ಟ ಅವಶ್ಯಕತೆಯ ಕಾರ್ಯಕ್ರಮದಡಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವ ಗುರಿ ಹೊಂದಿದ್ದು, ಅದನ್ನು ಗೋಕಾಕ್ ತಾಲ್ಲೂಕು, ಬಾಳೆಬಾ ಗ್ರಾಮಕ್ಕೆ ಈಗಾಗಲೇ ಮಂಜೂರು ಮಾಡಲಾಗಿದೆ. ಈಗಾಗಲೇ ಸದರಿ ಸಾಲಿನಲ್ಲಿ ನಿಗ್ದಿಪಡಿಸಿದ ಗುರಿಯಂತೆ ಬೆಳಗಾಂ ಜಿಲ್ಲೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಿರುವುದರಿಂದ ಬೆಳಗಾಂ ತಾಲ್ಲೂಕಿನ ಕಡೋಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಸಾಧ್ಯವಾಗಲಿಲ್ಲ. ಸದರಿ ಕಡೋಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಬೆಳಗಾಂ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಂದ ಮತ್ತು ಜಿಲ್ಲಾ ಪರಿಷತ್‌ನಿಂದ 1993-94 ರ ಸಾಲಿಗೆ ಪ್ರಸ್ತಾವನೆ ಬಂದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜುರಾತಿ ಬಗ್ಗೆ 1993-94 ನೇ ಸಾಲಿನಲ್ಲಿ ನಿಯಮಾವಳಿ ಪ್ರಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

3. ಕೊಡಗು ಜಿಲ್ಲೆಯ ಕುಟ್ಟ ಗಡಿ ಪ್ರದೇಶದಲ್ಲಿ ಗಂಧದ ಮರಗಳ ಕಳ್ಳಸಾಗಾಣಿಕೆ.

ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಕುಟ್ಟ ಗಡಿ ಪ್ರದೇಶದಲ್ಲಿ ಗಂಧದ ಮರಗಳ ಕಳ್ಳಸಾಗಾಣಿ ವಿಪರೀತ ಜಾಸ್ತಿಯಾಗುತ್ತಿದೆಯೆಂದು ಜನರು ಕೂಗುತ್ತಿದ್ದಾರೆ. ಹಿಂಗೆ ಇದನ್ನು ತಡೆಗಟ್ಟಲು ಮಾಕುಟ್ಟ ಗೇಟ್ ವಲಯ ಅರಣ್ಯಾಧಿಕಾರಿಗಳಿಗೆ ಅಧಿಕಾರವಿತ್ತು. ಈಗ ಈ ಅಧಿಕಾರವನ್ನು ಮಂಗಳೂರಿನ ಅರಣ್ಯ ಸ್ಕ್ವಾಡ್ ಡಿವಿಜನಲ್ ಕನ್ಸರ್ವೇಟೀವ್‌ರವರ ಮಡಿಕೇರಿ ಕಛೇರಿಗೆ ನೀಡಲಾಗಿದ್ದು, ಮಡಿಕೇರಿಗೆ ವರ್ತಮಾನ ತಿಳಿದು, ಅಲ್ಲಿಂದ ಕುಟ್ಟ ಪರಿಸರಕ್ಕೆ ಬರುವುದರೊಳಗೆ ಕಾಡೆಲ್ಲಾ ಪೂರ್ತಿ ಸೂರೆ ಆಗುತ್ತದೆ. ಇದರಿಂದಾಗಿ ಅನಿರ್ಬಂಧಿತ ಕಳ್ಳ ಸಾಗಣೆ ನಡೆದಿದೆ. ಪತ್ತಿರದಲ್ಲೇ ವಲಯ ಅರಣ್ಯಾಧಿಕಾರಿಗಳು ಇದ್ದು ಅವರು ಇದನ್ನೆಲ್ಲಾ ನೋಡುತ್ತಾ ಕಣ್ಣು ಕಣ್ಣುಬಿಡುತ್ತಾ, ನಿರಾಶರಾಗಿ ಕೈ ಹಿಸುಕಿಕೊಳ್ಳುವಂತಾಗಿದೆ. ವ್ಯವಸ್ಥೆಯ ಬದಲಾವಣೆಯಿಂದ ಕಳ್ಳ ಸಾಗಣಿಕೆ ನಿಲ್ಲಬೇಕೇ ಹೊರತು ಜಾಸ್ತಿ ಆಗಬಾರದು. ಈ ಬಗ್ಗೆ ಸೂಕ್ತ ಗಮನ ಹರಿಸಿ ಸ್ಥಳೀಯ ಅಧಿಕಾರಿಗಳಿಗೆ ಅಧಿಕಾರ ನೀಡಬೇಕು. ಕಳ್ಳ ಸಾಗಾಣೆಯನ್ನು ಸಂಪೂರ್ಣ ನಿಲ್ಲಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ.ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯಿಣಿಯವರು ಎತ್ತಿರತಕ್ಕ ಪ್ರಶ್ನೆಗೆ ಇಲಾಖೆಯಿಂದ ಇನ್ನೂ ಉತ್ತರ ಬಂದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಮಾನ್ಯ ಸದಸ್ಯಿಣಿಯವರಿಗೆ, ಉತ್ತರ ಕಳುಹಿಸುತ್ತೇನೆ.

4. ಕಾವೇರಿ ಜಲ ವಿವಾದ ಸಂದರ್ಭದಲ್ಲಿ ನಡೆದ ಗಲಬೆಯಲ್ಲಿ ಮಂಡ್ಯ ನಗರ ಹಾಗೂ ಜಿಲ್ಲೆಯ ನೊಂದವರಿಗೆ ಪರಿಹಾರ :